**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ</u>**

**ನ್ಯಾಯಿಕ ದಂಡಧಿಕಾರಿಗಳ ನ್ಯಾಯಾಲಯ, ಕುಷ್ಟಗಿ**

**ಸಿ ಸಿ ಸಂಖ್ಯೆಃ 1458/2022 ಸಿಡಬ್ಲ್ಯೂ ಃ 6**

**ಪಿಡಬ್ಲ್ಯೂ ಃ 3**

**ಸಾಕ್ಷಿದಾರರ ಹೆಸರು ಃ ಲಗಮಣ್ಣ**

**ತಂದೆಯ ಹೆಸರು ಃ ಲಕ್ಷ್ಮಣ್ಣ ಕೋಟೆ**

**ವಯಸ್ಸು ಃ 40 ವರ್ಷ**

**ಉದ್ಯೋಗ ಃ ಕುರಿ ಸಾಕಾಣಿಕೆ**

**ವಾಸ ಃ ಅಕ್ಕೊಳ**

**ದಿನಾಂಕಃ 27.09.2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ ರವರಿಂದಃ</u>**

**1.** ದಿನಾಂಕ 13.08.2022 ರಂದು ನಾನು, ಚಾಸಾ 1 ಹಾಗೂ ಮೃತ ಯಲ್ಲಪ್ಪ ಕುರಿಗಳನ್ನು ಹೊಡೆದುಕೊಂಡು ಹೋಗುತ್ತಿದ್ದೇವು. ಮದಲಗಟ್ಟಿ ಕೆರೆಯ ಹತ್ತಿರ ಎದುರುಗಡೆಯಿಂದ ಒಂದು ಲಾರಿ ಬಂದು ಕುರಿಗಳ ಮುಂದೆ ಇದ್ದ ಯಲ್ಲಪ್ಪನಿಗೆ ಡಿಕ್ಕಿ ಪಡಿಸಿ ಕುರಿಗಳ ಮೇಲೆ ಹಾಯಿಸಿ ಮುಂದೆ ಹೋಗಿ ನಿಂತಿರುತ್ತದೆ. ಸದರಿ ಲಾರಿ ಸಂಖ್ಯೆ ಕೆಎ 20/7745. ಯಲ್ಲಪ್ಪನಿಗೆ ತಲೆಗೆ, ಕೈ ಕಾಲಿಗೆ ಗಾಯ ಆಗಿತ್ತು ಮತ್ತು ಕಾಲು ಮುರಿದಿತ್ತು. ಆತ ಸ್ಥಳದಲ್ಲಿಯೇ ಮೃತಪಟ್ಟಿರುತ್ತಾನೆ. ಸುಮಾರು 15 ಕುರಿಗಳು ಸತ್ತಿದ್ದು, ಸುಮಾರು 20 ಕುರಿಗಳಿಗೆ ಸಣ್ಣಪುಟ್ಟ ಗಾಯ ಆಗಿರುತ್ತವೆ. ಸದರಿ ಲಾರಿಯ ಚಾಲಕ ಬಸವರಾಜ ಚಂದ್ರಶೇಖರ ರಾಂಪೂರೆಯನ್ನು ನಾನು ಮತ್ತು ಚಾಸಾ 1 ರವರು ಹಿಡಿದಿರುತ್ತೇವೆ. ನಂತರ ಪೊಲೀಸ ಠಾಣೆಗೆ ಹೋಗಿರುತ್ತೇವೆ. ಠಾಣೆಗೆ ಹೋಗಿ ದೂರು

ನೀಡಿರುತ್ತೇವೆ. ಕುರಿ ಮತ್ತು ಯಲ್ಲಪ್ಪನ ಸಾವಿಗೆ ಚಾಲಕನೇ ಕಾರಣ ಆಗಿರುತ್ತಾನೆ. ನಾನು ಲಾರಿ ಚಾಲಕನನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ನಾನು ಗಾಡಿ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನಿಪಿ 9 ರಲ್ಲಿರುವ ಲಾರಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎ ಎ ಪಿ ವಕೀಲರಿಂದಃ**

1. ನಮ್ಮ ಕುರಿಗಳು ಪೆಟ್ರೋಲ ಬಂಕ ಹತ್ತಿರ ಇರುವ ಪ್ಲಾಟನಲ್ಲಿ 2 ದಿನ ಇದ್ದವು. ಒಟ್ಟು 2 ಹಿಂಡು ಇದ್ದವು. 10 ರಿಂದ 20 ಅಡಿ ಅಂತರದಲ್ಲಿ 2 ಹಿಂಡು ಹೋಗುತ್ತಿದ್ದವು. ಕುಷ್ಟಗಿ ಬಿಟ್ಟಾಗ ಬೆಳಿಗ್ಗೆ 5 ಗಂಟೆ ಆಗಿತ್ತು. ಕುಷ್ಟಗಿಯಿಂದ ಮದಲಗಟ್ಟಿ ಕೆರೆ 6 ಕಿ.ಮೀ. ದೂರ ಇದೆ. ಸದರಿ ಹಿಂಡಿನಲ್ಲಿ ಒಟುಟ 4 ಜನ ಇದ್ದೇವು. ನಾವು ಡಾಂಬರ ರಸ್ತೆಯ ಒಂದು ಭಾಗದಲ್ಲಿ ಕುರಿಗಳನ್ನು ಹೊಡೆದುಕೊಂಡು ಹೋಗುತ್ತಿದ್ದೇವು. ಒಂದು ತಾಸಿಗೆ ಕುರಿಗಳು 4 ರಿಂದ 5 ಕಿ.ಮೀ. ಹೋಗುತ್ತವೆ. ಕುರಿಗಳು ರಸ್ತೆಯಲ್ಲಿ ಹೋಗುವುದರಿಂದ ಒಂದು ಪಕ್ಕದಲ್ಲಿ ವಾಹನಗಳು ನಿಧಾನವಾಗಿ ಹೋಗಬೇಕಾಗುತ್ತದೆ. ಸದರಿ ರಸ್ತೆಯಲ್ಲಿ ನಿಮಿಷಕ್ಕೆ 10 ರಿಂದ 15 ವಾಹಗಳು ಹೋಗುತ್ತವೆ. ಸದರಿ ದಿನ ಸ್ವಲ್ಪ ಬೆಳಕು ಇತ್ತು. ವಾಹನಗಳು ಲೈಟ ಹಾಕಿಕೊಂಡು ಬರುತ್ತಿದ್ದವು.
2. ನಾನು ಇದ್ದ ಸ್ಥಳದಿಂದ ಮೃತ ಯಲ್ಲಪ್ಪ 20 ಅಡಿ ದೂರದಲ್ಲಿ ಇದ್ದ. ಕುಷ್ಟಗಿಯಿಂದ ಮದಲಗಟ್ಟಿ ಕೆರೆಯವರೆಗೆ ಹೋಗುವ ಸಮಯದಲ್ಲಿ ನಮ್ಮ ಪಕ್ಕದಲ್ಲಿ ಸಾಕಷ್ಟು ವಾಹನಗಳು ಹಾದು ಹೋಗಿರುತ್ತವೆ. ನನಗೆ ಇಂಗ್ಲೀಷ ಓದಲು ಮತ್ತು ಬರೆಯಲು ಬರುವುದಿಲ್ಲ ಆದರೆ ಕನ್ನಡ ಓದಲು, ಬರೆಯಲು ಬರುತ್ತದೆ. ಅಪಘಾತ ಆದಾಗ ಮೃತ ಯಲ್ಲಪ್ಪ 20 ಅಡಿ ದೂರದಲ್ಲಿ ಹಾಗೂ ಚಾಸಾ 1 ರವರು 15 ಅಡಿ ದೂರದಲ್ಲಿದ್ದ. ಕುಷ್ಟಗಿಯಿಂದ ಗಜೇಂದ್ರಗಡ ಹೋಗುವ ರಸ್ತೆಯ ಬಲಭಾಗದಲ್ಲಿ ಮೃತ ಯಲ್ಲಪ್ಪ ಇದ್ದ. ಮೃತ ಯಲ್ಲಪ್ಪನಿಗೆ ಲಾರಿಯ

ಮುಂದಿನ ಎಡಭಾಗ ಡಿಕ್ಕಿ ಪಡಿಸಿರುತ್ತದೆ. ಲಾರಿ ಯಲ್ಲಪ್ಪನ ತಲೆಗೆ ಡಿಕ್ಕಿ ಪಡಿಸಿರುತ್ತದೆ. ಡಿಕ್ಕಿ ಪಡಿಸಿ ಲಾರಿ 20 ಅಡಿ ದೂರ ಹೋಗಿ ನಿಂತಿರುತ್ತದೆ.

3. ಸತ್ತ 15 ಕುರಿಗಳು ಯಾರಿಗೆ ಸೇರಿದ್ದು ಎಂದು ನನಗೆ ಹೇಳಲು ಆಗುವುದಿಲ್ಲ. ಲಾರಿ ಬರುವುದನ್ನು 200 ರಿಂದ 300 ಅಡಿ ದೂರದಿಂದ ನೋಡಿರುತ್ತೇನೆ. ಲಾರಿಯಲ್ಲಿ ಒಬ್ಬನೇ ಇದ್ದ. ಲಾರಿಯ ಚಾಲಕನೇ ತನ್ನ ಹೆಸರನ್ನು ಸ್ಥಳದಲ್ಲಿಯೇ ನಾವು ಕೇಳಿದಾಗ ಹೇಳಿರುತ್ತಾನೆ. ಹೆಸರು ಕೇಳಿದಾಗ ಚಾಸಾ 1 ರವರು ಇದ್ದರು. ಅಪಘಾತದ ಕುರಿತು ಪೊಲೀಸರಿಗೆ ನಾನು ಮತ್ತು ಚಾಸಾ 1 ಪೋನು ಮಾಡಿ ತಿಳಿಸಿರುತ್ತೇವೆ. ಪೊಲೀಸರು ಸುಮಾರು 7 ಗಂಟೆಗೆ ಸ್ಥಳಕ್ಕೆ ಬಂದಿರುತ್ತಾರೆ. ಸ್ಥಳದಲ್ಲಿಯೇ ಘಟನೆಯ ಕುರಿತು ಪೊಲೀಸರಿಗೆ ತಿಳಿಸಿರುತ್ತೇವೆ. ಚಾಸಾ 1 ರವರು ಆ ರೀತಿ ತಿಳಿಸಿರುತ್ತಾರೆ. ಆ ಬಗ್ಗೆ ಸ್ಥಳದಲ್ಲಿ ಪೊಲೀಸರು ಬರೆದುಕೊಂಡಿರುತ್ತಾರೆ. ಪೊಲೀಸರು ನನ್ನ ಹೆಸರನ್ನು ಸಾಕ್ಷಿಯಾಗಿ ಬರೆದುಕೊಂಡಿರುತ್ತಾರೆ.

4. ಪೊಲೀಸರು 07.30 ರಿಂದ 08.00 ಗಂಟೆಯ ಸಮಯದಲ್ಲಿ ಖಾಸಗಿ ವಾಹನದಲ್ಲಿ ಹೆಣ ತೆಗೆದುಕೊಂಡು ಹೋಗಿರುತ್ತಾರೆ. ಸದರಿ ವಾಹನದ ಸಂಖ್ಯೆ ಮತ್ತು ಅದು ಯಾರಿಗೆ ಸೇರಿದ್ದು ಎಂದು ನನಗೆ ಹೇಳಲು ಆಗುವುದಿಲ್ಲ. ನಾನು ಠಾಣೆಗೆ 09.00 ಗಂಟೆಗೆ ಹೋಗಿರುತ್ತೇನೆ. ಠಾಣೆಗೆ ಚಾಸಾ 1, ಚಾಸಾ 3, ಚಾಸಾ 5 ಮತ್ತು ನಾನು ಹೋಗಿದ್ದೇವು. ದೂರನ್ನು ಚಾಸಾ 1 ರವರನ್ನು ಕೇಳಿ ಚಾಸಾ 5 ಬರೆದಿರುತ್ತಾನೆ. ದೂರಿಗೆ ನಾನು, ಚಾಸಾ 1 ಮತ್ತು ಚಾಸಾ 5 ಸಹಿ ಮಾಡಿರುತ್ತೇವೆ. ದೂರನ್ನು ಬರೆಯಲು ಚಾಸಾ 1 ರವರು ಹೇಳಿರುತ್ತಾರೆ.

5. ಘಟನೆಯ ಕುರಿತು ಸ್ಥಳದಲ್ಲಿಯೇ ಪೊಲೀಸರು ನನ್ನನ್ನು ವಿಚಾರಣೆ ಮಾಡಿರುತ್ತಾರೆ. ಪೊಲೀಸ ಠಾಣೆಗೆ ಹೋದ ನಾವು ಒಂದೇ ಗ್ರಾಮದವರು. ಅಪಘಾತ ಸ್ಥಳದಲ್ಲಿ ಆಜು ಬಾಜು ಗ್ರಾಮದ ಜನರು ಇದ್ದರು. ನಮ್ಮ ಕುರಿಗಳಿಗೆ ಯಾವುದೇ ವಿಮೆ ಮಾಡಿಸಿಲ್ಲ. ಮೃತನ ಕುಟುಂಬದವರು ಪರಿಹಾರಕ್ಕಾಗಿ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದಾರೆ. ಚಾಸಾ 1 ರವರು ಸಹ ಕುರಿ ಸತ್ತ ಕುರಿತು ಪರಿಹಾರಕ್ಕಾಗಿ ಅರ್ಜಿ ಸಲ್ಲಿಸಿರುತ್ತಾರೆ.

೮. ಸದರಿ ದಿನ ನಾವು ಕುರಿಗಳನ್ನು ಅಡ್ಡಾದಿಡ್ಡಿಯಾಗಿ ಹೊಡೆದುಕೊಂಡು ಹೋದ ಕಾರಣ ಯಾವುದೋ ಗಾಡಿ ಕುರಿಗೆ ಮತ್ತು ಯಲ್ಲಪ್ಪನಿಗೆ ಕುಷ್ಟಗಿಯಲ್ಲಿಯೇ ಡಿಕ್ಕಿ ಪಡಿಸಿದೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಕತ್ತಲು ಇದ್ದ ಕಾರಣ ನಮಗೆ ಯಾವುದೇ ಗಾಡಿ ಗುರುತಿಸಲು ಆಗದ ಕಾರಣ ಆರೋಪಿ ಲಾರಿ ಮೇಲೆ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ನಾನು ಸದರಿ ದಿನ ಯಾವುದೇ ಅಪಘಾತ ನೋಡಿಲ್ಲ ಎಂದರೆ ಸರಿಯಲ್ಲ. ನಾನು ಸದರಿ ದಿನ ಯಾವುದೇ ಚಾಲಕನನ್ನು ಹಿಡಿದು ಆತನ ಹೆಸರು ಕೇಳಿಲ್ಲ ಎಂದರೆ ಸರಿಯಲ್ಲ. ಕುರಿಗೆ ಮತ್ತು ಮೃತ ಯಲ್ಲಪ್ಪನ ಕುಟುಂಬಕ್ಕೆ ಪರಿಹಾರ ದೊರೆಯಲು ನಾನು ಮತ್ತು ಚಾಸಾ 1 ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಕುರಿಗೆ ವಿಮೆ ಇಲ್ಲದ ಕಾರಣ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ನಾನು ಚಾಸಾ 1 ರವರ ಜೊತೆ ಠಾಣೆಗೆ ಹೋಗಿದ್ದೆ ಹಾಗೂ ಪೊಲೀಸರು ನನ್ನನ್ನು ಸಾಕ್ಷಿಯಾಗಿ ನನ್ನನ್ನು ಬರೆದುಕೊಂಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ 1 ನಮ್ಮ ಗ್ರಾಮದವನು ಆದ ಕಾರಣ ಆತನಿಗೆ ಅನುಕೂಲ ಮಾಡಲು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ.ಕೇ. ಸರಿ ಇದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ. ನ್ಯಾ.ದಂಡಧಿಕಾರಿಗಳು, ಕುಷ್ಟಗಿ